"ಬಿ" ವರ್ಗ - 35

"ಸಿ" ವರ್ಗ - 189

"ಡಿ" ವರ್ಗ - 98

ಆ) 78.

"ಎ" ವರ್ಗ - 22

"ಬಿ" ವರ್ಗ - 14

"ಸಿ" ವರ್ಗ - 33

"ಡಿ" ವರ್ಗ - 9

ಇ) 30.

"ಎ" ವರ್ಗ - -

"ಬಿ" ವರ್ಗ - 13

"ಸಿ" ವರ್ಗ - 9

"ಡಿ" ವರ್ಗ - 8

ಸವನೂರು ತಾಲ್ಲೂಕುಗಳಲ್ಲಿ ಶಿಕ್ಷಕರ ಕೊರತೆ.

894 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಖಾಲಿ ಇರುವ ಪ್ರಾಥಮಿಕ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು? ಅವುಗಳನ್ನು ಎಷ್ಟು ದಿನಗಳಲ್ಲಿ ತುಂಬಲಾಗುವುದು?

ಇ) ಒಂದು ತರಗತಿಗೆ ಒಬ್ಬ ಶಿಕ್ಷಕನಂತೆ ನೇಮಕ ಮಾಡಿಕೊಂಡಲ್ಲಿ ಇನ್ನು ಎಷ್ಟು ಶಿಕ್ಷಕರನ್ನು ರಾಜ್ಯದಲ್ಲಿ ಭರ್ತಿ ಮಾಡಬೇಕಾಗುತ್ತದೆ?

ಈ) ಸದರಿ ಶಿಕ್ಷಕರನ್ನು ಎಂದು ಭರ್ತಿ ಮಾಡಿಕೊಳ್ಳಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) 18,700 (ಜಿಲ್ಲಾವಾರುವಿವರವನ್ನು ಅನುಬಂಧದಲ್ಲಿ ನೀಡಿದೆ)

ಆ) ಶಿಗ್ಗಾಂವ ಮತ್ತು ಸವಣೂರು ತಾಲ್ಲೂಕುಗಳಲ್ಲಿ ಕ್ರಮವಾಗಿ 92 ಮತ್ತು 55 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಇವುಗಳನ್ನು ಸಧ್ಯದಲ್ಲಿಯೇ, ಭರ್ತಿ ಮಾಡಲಾಗುವುದು.

ಇ) ಒಂದು ತರಗತಿಗೆ ಒಬ್ಬ ಶಿಕ್ಷಕರಂತೆ ಈಗಾಗಲೇ ಮಂಜೂರಾಗಿರುವ ಹುದ್ದೆಗಳ ಜೊತೆಗೆ 54,259 ಪ್ರಾಥಮಿಕ ಶಾಲಾ ಹುದ್ದೆಮಂಜೂರು ಮಾಡಿ ನೇಮಕ ಮಾಡಬೇಕಾಗುತ್ತದೆ.

ಈ) 1994-95, ಮತ್ತು 95-96ನೇ ಸಾಲಿನ ಪ್ರತಿ ವರ್ಷಗಳಲ್ಲಿ ಮಂಜೂರಾದ 5,000 ಹುದ್ದೆಗಳನ್ನು 95-96ನೇ ಸಾಲಿನಲ್ಲಿ ತುಂಬಲಾಗುತ್ತಿದೆ. ಕೇಂದ್ರ ಪುರಸ್ಕೃತ ಯೋಜನೆಯಡಿ ಹಾಗೂ ರಾಜ್ಯ ಯೋಜನೆಯಡಿಯ ಹಣದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಈ ಎಲ್ಲಾ ಹುದ್ದೆಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದು.

ಅನುಬಂಧ

ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳ ಜಿಲ್ಲಾವಾರು ವಿವರಗಳು

ಕ್ರ.ಸಂ.	*ಜಿಲ್ಲೆಯ ಹೆಸರು*	*ಖಾಲಿ ಹುದ್ದೆಗಳ ಸಂಖ್ಯೆ*
1)	ಬೆಂಗಳೂರು ಉತ್ತರ	59
2)	ಬೆಂಗಳೂರು ದಕ್ಷಿಣ	17
3)	ಬೆಂಗಳೂರು ಗ್ರಾಮಾಂತರ	735
4)	ತುಮಕೂರು	776
5)	ಕೋಲಾರ	351
6)	ಚಿತ್ರದುರ್ಗ	686
7)	ಶಿವಮೊಗ್ಗ	211
8)	ಮೈಸೂರು	378
9)	ಮಂಡ್ಯ	313
10)	ಕೊಡಗು	136
11)	ಹಾಸನ	384
12)	ಚಿಕ್ಕಮಗಳೂರು	186
13)	ದಕ್ಷಿಣ ಕನ್ನಡ	912

14)	ಬೆಳಗಾಂ	722
15)	ಬಿಜಾಪುರ	576
16)	ಧಾರವಾಡ	1213
17)	ಉತ್ತರ ಕನ್ನಡ	385
18)	ಗುಲ್ಬರ್ಗಾ	404
19)	ಬೀದರ್	595
20)	ರಾಯಚೂರು	310
21)	ಬಳ್ಳಾರಿ	495
		9974

ಅ) ಡಿ.ಪಿ.ಇ.ಪಿ ಅಡಿಯಲ್ಲಿಯ ಮಂಜೂರಾದ ಹುದ್ದೆಗಳು (ಮಂಡ್ಯ - 60, ಕೋಲಾರ -60, ರಾಯಚೂರು ಮತ್ತು ಬೆಳಗಾಂ) 530

ಆ) 1995-96ನೇ ಸಾಲಿನಲ್ಲಿ ಮಂಜೂರಾದ ಹುದ್ದೆಗಳು 5000

ಇ) 5 ಮತ್ತು 6ನೇ ಹಂತಗಳ ಕಪ್ಪುಹಲಗೆ

ಕಾರ್ಯಾಚರಣೆಯಡಿಯಲ್ಲಿ ಮಂಜೂರಾದ ಹುದ್ದೆಗಳು 3196

ಒಟ್ಟು ಹುದ್ದೆಗಳು 18700

ಅರಣ್ಯ ಇಲಾಖೆ ಬೆಳೆಸಿದ ನೀಲಗಿರಿ ಮರಗಳು

897 - ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮ ಪಂಚಾಯತ್ ವ್ಯಾಪ್ತಿಯೊಳಗೆ ಅರಣ್ಯ ಇಲಾಖೆ ಬೆಳೆಸಿದ ನೀಲಗಿರಿ ಮರಗಳು ದೊಡ್ಡ ಪ್ರಮಾಣದಲ್ಲಿ ಕಳುವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಅರಣ್ಯ ಇಲಾಖೆಯ ಈ ನೀಲಗಿರಿ ತೋಪುಗಳನ್ನು ಅದರ ನಿರ್ವಹಣೆಯನ್ನು ಪಂಚಾಯಿತಿಯ ಚಟುವಟಿಕೆಗಾಗಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸುವ ಯಾವುದಾದರೂ ಪ್ರಸ್ತಾವನೆ ಇದೆಯೆ?

ಇ) ಇಲ್ಲದಿದ್ದಲ್ಲಿ ಅರಣ್ಯ ಆಸ್ತಿಯನ್ನು ರಕ್ಷಿಸಲು ಸರ್ಕಾರವು ಏನು ಕ್ರಮ ಕೈಗೊಂಡಿದೆ?